ಮಾತ್ರವಲ್ಲ, ನಿಮ್ಮದೇ ನಿಟ್ಟಿನಿಂದಲೂ ನೋಡಬೇಕೆಂಬುದೇ. ಏಕೆಂದರೆ, ಇದು ಕಮೂಗೆ ಮನುಷ್ಯನನ್ನು, ಮನಸ್ಸನ್ನು ಮತ್ತು ಬದುಕನ್ನು ಅರಿಯುವ ಒಂದು ಮಾರ್ಗವೇ ಹೊರತು ಇನ್ನೇನಲ್ಲ. ನಮ್ಮನ್ನು ನಾವು ಅರಿಯುವ ಪ್ರಯತ್ನದಲ್ಲಿಯೇ ನಾವು ನಮ್ಮೊಂದಿಗಿರುವ ನಮ್ಮಂಥ ಎಲ್ಲರನ್ನೂ ಅರಿಯುವುದು ಕೂಡ ಸಾಧ್ಯವಾಗಬೇಕು. ಇದಕ್ಕಾಗಿಯೇ ಆತ ಪತ್ರಕರ್ತನ ಸತ್ಯನಿಷ್ಠುರ ಶೈಲಿಯನ್ನೂ, ಸೃಜನಶೀಲ ಕಲೆಗಾರನ ತಂತ್ರವನ್ನೂ ಜೊತೆಯಾಗಿಯೇ ದುಡಿಸಿಕೊಳ್ಳುತ್ತಾನೆ. ಇಲ್ಲಿ ಎರಡು ಮಾರ್ಗಗಳಿವೆ.

ಮೊದಲನೆಯದು ವ್ಯಕ್ತಿ ಮತ್ತು ಸಮುದಾಯದ ಪ್ರಜ್ಞೆಯನ್ನು ಗ್ರಹಿಸುವ ಮಾರ್ಗ. ವ್ಯಕ್ತಿ ಮತ್ತು ಸಮುದಾಯ ಎರಡೂ ಸ್ವತಂತ್ರವಾಗಿ ವರ್ತಿಸುವ ಬಗೆ ಬೇರೆ, ಒಂದಾದಾಗ ವರ್ತಿಸುವ ಬಗೆ ಬೇರೆ ಎನ್ನುವುದು ನಿಜವಾದರೂ ವ್ಯಕ್ತಿಯೇ ಸಮುದಾಯದ ಪ್ರಧಾನ ಘಟಕ ಎನ್ನುವುದು ಕೂಡ ಅಷ್ಟೇ ನಿಜ. ಹಾಗಾಗಿ ಎರಡರ ನಡುವೆ ತುಯ್ಯುತ್ತ ಈ ಕೃತಿಯ ನಡೆ ಸಾಗುವುದು ಎಂಥ ಓದುಗನಿಗಾದರೂ ಒಂದು ಬಗೆಯ ವ್ಯಾಯಾಮವನ್ನು ಒದಗಿಸುವುದು ಸುಳ್ಳಲ್ಲ. ಎರಡನೆಯದು ಹೆಚ್ಚು ಮುಖ್ಯವಾದದ್ದು ಮತ್ತು ಗಂಭೀರವಾದದ್ದು ಕೂಡ. ವಾಸ್ತವವನ್ನು ನಿರೂಪಿಸುತ್ತೇನೆ ಎಂದು ಹೊರಡುವ ಪ್ರತಿಯೊಬ್ಬ ಲೇಖಕನಿಗೂ ತಾನು ಉದ್ದೇಶಿಸುವ ವಾಸ್ತವ ಯಾವುದು ಎಂಬ ಬಗ್ಗೆ ಅತ್ಯಂತ ಸ್ಪಷ್ಟವಾದ ಅರಿವಿರಬೇಕಾಗುತ್ತದೆ. ಅಂದರೆ, ನಾವು ಬದುಕುತ್ತಿರುವ ನಮ್ಮ ದೈನಂದಿನ ವಾಸ್ತವವನ್ನು ಆಯಾ ಕ್ಷಣಗಳಲ್ಲೇ ನಾವು ಗ್ರಹಿಸುವುದು ಬೇರೆ, ಅದನ್ನೇ ದೇಶ–ಕಾಲ ಎರಡೂ ನಿಟ್ಟಿನ ಅಂತರದಿಂದ ಅದೇ ಕಾಲಕ್ಕೆ (ಆನಂತರದಲ್ಲಿ ಅಥವಾ ಮತ್ತೊಮ್ಮೆ ಅಲ್ಲ) ಗ್ರಹಿಸುವುದೇ ಬೇರೆ. ಈ ದೇಶ–ಕಾಲ ಅಂತರವೊಂದು ಅದೇ ಕಾಲಕ್ಕೆ ಸಾಧ್ಯವಾಗುವುದು ಕಲೆಯಲ್ಲಿ ಮಾತ್ರ ಎನ್ನುವುದು ನಿಜ. ಹಾಗೆ ಕಲೆಯಲ್ಲಿ ಮೂಡುವ (ಕಲ್ಪಿತ) ವಾಸ್ತವ ನಿಜಕ್ಕೂ ಮೂರನೆಯ ಆಯಾಮದ್ದು. ಇದು, ಮರದಲ್ಲಿ ಕೂತ ಹಕ್ಕಿ ಹಣ್ಣು ತಿನ್ನುತ್ತಿದೆ ಮತ್ತು ಅದೇ ಕಾಲಕ್ಕೆ ಹಕ್ಕಿ (ಇನ್ನೊಂದು ಹಕ್ಕಿಯಲ್ಲ, ಅದೇ ಹಕ್ಕಿ) ಅದನ್ನು ಗಮನಿಸುತ್ತಿದೆ ಎಂದಂತೆ. ಕಮೂಗೆ ತಾನು ಮಾಡಹೊರಟಿದ್ದರ ಸ್ಪಷ್ಟ ಅರಿವಿತ್ತು ಎನ್ನುವುದಕ್ಕೆ ಕೃತಿಯಲ್ಲೇ ಸಾಕಷ್ಟು ಸಾಕ್ಷ್ಯಗಳಿವೆ. ಆದರೆ, ನಮ್ಮ ನವ್ಯ ಕಾಲಘಟ್ಟದಲ್ಲಿ ಇದನ್ನು ಎಗ್ಸಿಸ್ಟೆಂಟಿಯಲಿಸ್ಟ್ ಅವಸ್ಥೆ ಎಂದು ಸೀಮಿತಗೊಳಿಸಿ ನೋಡಲಾಯಿತೆ ಎನ್ನುವುದು ಉತ್ತರವಿಲ್ಲದೆ ಉಳಿದು ಹೋಗುವ ಪ್ರಶ್ನೆ. ಆದರೆ, ಇಂದು ಅದನ್ನು ಮತ್ತೆ ಎತ್ತುವುದರಿಂದಲೇ ನಮಗೆ ಸೃಜನಾತ್ಮಕವಾಗಿ ಕಮೂ ಏಕೆ ಮುಖ್ಯನಾಗುತ್ತಾನೆಂಬುದಕ್ಕೆ ಉತ್ತರ ಸಿಗುತ್ತದೆ. ಹಾಗಾಗಿ ಈ ಅನುವಾದಕ್ಕೆ ಬಹಳ ಮಹತ್ವವಿದೆ.

ಕಾದಂಬರಿಯ ಆರಂಭದಲ್ಲಿಯೇ ಒಂದು ಮಾತು ಬರುತ್ತದೆ. ಓರಾನ್ ಎಂಬ ಒಂದು ಪುಟ್ಟ ನಗರವನ್ನು ವಿವರಿಸುತ್ತ, ಆ ಊರು ಎಷ್ಟು ವಿಲಕ್ಷಣವಾದದ್ದು ಎನ್ನುವಾಗಲೇ ಬರುವ ಮಾತದು. ಒಂದು ಊರನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಆ ಊರಿನ ಜನರ ಕುರಿತ ಮೂರು ವಿಚಾರಗಳನ್ನು ತಿಳಿದುಕೊಳ್ಳಬೇಕು. ಆ ಊರಿನ ಜನ ಯಾವ್ಯಾವ ಬಗೆಯ ಕೆಲಸ ಕಾರ್ಯಗಳಲ್ಲಿ ತಮ್ಮ ದಿನವನ್ನು ವ್ಯಯಿಸುತ್ತಾರೆ ಎನ್ನುವುದನ್ನು, ಅಲ್ಲಿನ ಜನರ ನಡುವಿನ ಸಂಬಂಧಗಳು, ಪ್ರೀತಿ–ಜಗಳ–ದ್ವೇಷ ಇತ್ಯಾದಿ ಹೇಗಿರುತ್ತದೆ ಎನ್ನುವುದನ್ನು ಮತ್ತು ಅಲ್ಲಿನ ಮಂದಿ ಸಾಮಾನ್ಯವಾಗಿ ಹೇಗೆ ಸಾಯುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದು. ಈ ಮಾತಿಗಿರುವ ಒಂದು ವ್ಯಕ್ತಿಗತವಾದ, ವೈಯಕ್ತಿಕವಾದ ಮುಖದ ಜೊತೆಗೇ ಅದಕ್ಕೊಂದು ಸಾಮುದಾಯಿಕವಾದ ಮುಖವೂ ಇದೆ ಎನ್ನುವುದು ಈ ನುಡಿಯನ್ನು ಅದೆಷ್ಟು ಧ್ವನಿಪೂರ್ಣ ಮಾಡುತ್ತದೆ ಎನ್ನುವುದನ್ನು ಗಮನಿಸಿ. ಇಡೀ ಕಾದಂಬರಿಯ ಒಟ್ಟಾರೆ ಗಮ್ಯ ಇದಲ್ಲದೇ ಬೇರೆಯಲ್ಲ ಅನಿಸಿಬಿಡುವುದು ಇಂಥಲ್ಲೇ. ರಿಯೂ, ತಾಹೂ, ಗ್ರ್ಯಾಂಟ್, ರೋಂಬೆ, ಮುದುಕ, ಕೊತಾ ಪ್ರತಿಯೊಬ್ಬರೂ ನಮಗೆ ವೃತ್ತಿ–ಪ್ರವೃತ್ತಿ, ಮನುಷ್ಯ